ಓ.ಎಸ್. ನಂ. 44/2020 ಡಿ.ಡಬ್ಲ್ಯೂ- 3

**ಸಾಕ್ಷಿಯನ್ನು ದಿನಾಂಕ 27.9.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ವಿ ವಕೀಲರಿಂದಃ**

ನನಗೆ 50 ವರ್ಷವಾಗಿರುತ್ತದೆ. ನಾನು ದಿನಾಂಕ 25.6.1973 ರಲ್ಲಿ ಜನಿಸಿರುತ್ತೇನೆ. ನಾನು 10 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಹಂಚಿಪುರ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಮ್ಮ ಗ್ರಾಮದಲ್ಲಿ 250 ಮನೆಗಳು ಇರುತ್ತವೆ. 250 ಮನೆಗಳ ಜನರಿಗೆ ಏನೆಲ್ಲ ಆಸ್ತಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು 1 ನೇ ಪ್ರತಿವಾದಿಯ ಪರ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನೀವು ಈ ದಾವೆಗೆ ಪ್ರತಿವಾದಿಯರು ಸಲ್ಲಿಸಿರುವ ತಕರಾರು ಹಾಗೂ ವಾದಿ ಮತ್ತು ಪ್ರತಿವಾದಿಯರು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ನೋಡಿರುತ್ತೀರಾ ಎಂದರೆ ಸಾಕ್ಷಿದಾರರು ಎಲ್ಲ ದಾಖಲೆಗಳನ್ನು ನೋಡಿರುವುದಿಲ್ಲ ಎನ್ನುವರು. ಯಾವ ದಾಖಲೆಯನ್ನು ನೋಡಿರುತ್ತೀರಿ ಎಂದರೆ ಸಾಕ್ಷಿದಾರರು ಅದಲು ಬದಲು ಪತ್ರವನ್ನು ನೋಡಿರುತ್ತೇನೆ ಎನ್ನುವರು. ನಿಡಿ10 ದಾಖಲೆಯು ಸದರಿ ಅದಲು ಬದಲು ಪತ್ರವಾಗಿರುತ್ತದೆ. ನೀವು ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿದಾರರು ಹಾಕಿರಬಹುದು ಎನ್ನುವರು. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿದಾರರು ನಾನು ಹೇಳಿರುತ್ತೇನೆ ಎನ್ನುವರು. ನನ್ನ ಪ್ರಮಾಣಪತ್ರದಲ್ಲಿ ಪ್ರತಿವಾದಿಯರು ಎಂದಿಗೂ ಸಹ ದಾವಆಸ್ತಿಯ ಸ್ವಾಧೀನಾನುಭವವನ್ನು ಹೊಂದಿರುವುದಿಲ್ಲ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಿಡಿ10 ನ್ನು 1975 ರಲ್ಲಿ ತಯಾರಿಸಲಾಗಿರುತ್ತದೆ. ನಿಡಿ10 ನ್ನು ತಯಾರಿಸಿರುವ ಸ್ಟಾಂಪ್ ಪೇಪರಿನಲ್ಲಿ ದಿನಾಂಕ 9.10.1998 ಎಂದು ಸೀಲ್ ಹಾಕಲಾಗಿರುತ್ತದೆ. 1998 ರಲ್ಲಿ ಸ್ಟಾಂಪ್ ಪೇಪರನ್ನು ತೆಗೆದುಕೊಂಡು 1975 ರ ಪತ್ರ ಬರೆಯಲು ಸಾಧ್ಯವಾ ಎಂದರೆ ಸಾಕ್ಷಿದಾರರು ಸಾಧ್ಯವಿಲ್ಲ ಎನ್ನುವರು. ನಿಡಿ10 ನ್ನು ಈ ಕೇಸಿಗೆ ಅನುಕೂಲವಾಗಲೆಂದು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಸಣ್ಣಪ್ಪ ರವರಿಗೆ ಮೊದಲನೇ ಹೆಂಡತಿ ಪುಟ್ಟತಾಯಮ್ಮ ಮತ್ತು ಎರಡನೇ ಹೆಂಡತಿ ಗುರುಮಲ್ಲಮ್ಮ ಇರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಸಣ್ಣಪ್ಪ ರವರಿಗೆ ಎರಡನೇ ಹೆಂಡತಿ ಗುರುಮಲ್ಲಮ್ಮ ಇರಲಿಲ್ಲ ಎಂದರೆ ಸಾಕ್ಷಿದಾರರು ಊರಿನಲ್ಲಿ ಗುರುಮಲ್ಲಮ್ಮ ಎಂಬ ಎರಡನೇ ಹೆಂಡತಿ ಇದ್ದರು ಎನ್ನುವರು. ನಿಡಿ9 ರಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಗುರುಮಲ್ಲಮ್ಮನ ಮಗ ರಾಜಪ್ಪ ಎಂದರೆ ನನಗೆ ಗೊತ್ತಿರುವುದಿಲ್ಲ. ಗುರುಮಲ್ಲಮ್ಮನಿಗೆ ಮಕ್ಕಳಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಡಿ7 ರಲ್ಲಿ ಗುರುಮಲ್ಲಮ್ಮನಿಗೆ ಮಕ್ಕಳಿರುವ ಬಗ್ಗೆ ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿದಾರರು 3 ಜನ ಮಕ್ಕಳಿರುತ್ತಾರೆ ಎಂದು ತೋರಿಸಲಾಗಿರುತ್ತದೆ ಎನ್ನುವರು. ನಿಡಿ7 ರಲ್ಲಿ 1 ನೇ ಪ್ರತಿವಾದಿಯ ಸಹಿ ಇರುವುದಿಲ್ಲ. 1 ನೇ 1 ನೇ ಪ್ರತಿವಾದಿಗೆ 3 ಜನ ಸಹೋದರರು ಇದ್ದು ಅವರ ಹೆಸರು ಸಿದ್ದಮಲ್ಲಪ್ಪ, ಬಸವಣ್ಣ ಮತ್ತು ಶಿವನಂಜಪ್ಪ ಆಗಿರುತ್ತದೆ. ಅವರ ಪೈಕಿ ಸಿದ್ದಮಲ್ಲಪ್ಪ ತೀರಿಕೊಂಡಿರುತ್ತಾರೆ. 1 ನೇ

ಪ್ರತಿವಾದಿಯ ತಾಯಿಯ ಹೆಸರು ಮರೆತು ಹೋಗಿರುತ್ತದೆ. ನಿಡಿ9 ರಲ್ಲಿ ರಾಜಪ್ಪನ ತಂದೆಯ ಹೆಸರು ಪುಟ್ಟತ್ತಪ್ಪ ಮತ್ತು ತಾಯಿಯ ಹೆಸರು ಗುರುಮಲ್ಲಮ್ಮ ಎಂದು ನಮೂದಾಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ಸಂಬಂಧಿಕನಾಗಿರುವುದಿಲ್ಲ, ನಮ್ಮ ಊರಿನವರಾಗಿರುತ್ತಾರೆ. 1 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣ ಇಲ್ಲದಿರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.